# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1882
2. ಸದಸ್ಯರ ಹೆಸರು : ಶ್ರೀ ಸಿ.ಎನ್ ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 15.03.2022
4. ಉತ್ತರಿಸುವ ಸಚಿವರು : ಮಾನ್ಯ ಸಹಕಾರ ಸಚಿವರು

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕೇಂದ್ರ ಕೃಷಿ ವಿಕಾಸ್ ಯೋಜನೆಯಡಿ ಎಷ್ಟು ವರ್ಷಗಳ ಹಿಂದೆ ಉಗ್ರಾಣಗಳನ್ನು ನಿರ್ಮಾಣ ಮಾಡಲು ಯೋಜನೆಯನ್ನು ರೂಪಿಸಲಾಗಿತ್ತು; ಈ ಯೋಜನೆಯ ಉದ್ದೇಶವೇನು; (ವಿವರ ನೀಡುವುದು) | ಕೇಂದ್ರ ಕೃಷಿ ವಿಕಾಸ ಯೋಜನೆಯಡಿ 2009-10 ನೇ ಸಾಲಿನಿಂದ ಉಗ್ರಾಣ ನಿರ್ಮಾಣ ಯೋಜನೆಯನ್ನು ಅನುಷ್ಠಾನಗೊಳಿಸಲು ಕ್ರಮವಹಿಸಲಾಗಿರುತ್ತದೆ.<br>ಮುಂದುವರೆದು ರಾಜ್ಯಾದ್ಯಂತ ರೈತರು ಬೆಳೆದ ವ್ಯವಸಾಯ ಉತ್ಪನ್ನಗಳು, ಸಾರ್ವಜನಿಕ ಪಡಿತರ ವ್ಯವಸ್ಥೆ, ಭಾರತೀಯ ಆಹಾರ ನಿಗಮ, ಅನ್ನಭಾಗ್ಯ ಹಾಗೂ ಸರ್ಕಾರದ ಮಹತ್ವಕಾಂಕ್ಷಿ ಯೋಜನೆಯಾದ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಖರೀದಿ ಮಾಡಿದ ವಿವಿಧ ಆಹಾರ ಧಾನ್ಯಗಳನ್ನು ನಿಗಮದ ಉಗ್ರಾಣಗಳಲ್ಲಿ ವೈಜ್ಞಾನಿಕ ಮಾದರಿಯಲ್ಲಿ ಸಂಗ್ರಹಣೆ ಮಾಡುವುದು ನಿಗಮದ ಉದ್ದೇಶವಾಗಿರುತ್ತದೆ. |
| ಆ) | ಈ ಯೋಜನೆಯಡಿ ಎಷ್ಟು ಮೊತ್ತವನ್ನು ವಿನಿಯೋಗಿಸಿ ಎಷ್ಟು ಉಗ್ರಾಣವನ್ನು ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ ಎಂಬ ಬಗ್ಗೆ ಸಂಪೂರ್ಣ ಮಾಹಿತಿಯೊಂದಿಗೆ ವಿವರ ನೀಡುವುದು ; | ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿಯಲ್ಲಿ 2009-10 ಮತ್ತು 2012-13 ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಅನುದಾನ ಶೇ. 100 ರಂತೆ ಉಗ್ರಾಣಗಳನ್ನು ನಿರ್ಮಾಣ ಮಾಡಲಾಗಿರುತ್ತದೆ. (see table below)<br>ಈ ಮೇಲ್ಕಂಡಂತೆ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಕೇಂದ್ರ ಸರ್ಕಾರದ ಅನುದಾನ ಹಾಗೂ ರಾಜ್ಯ ಸರ್ಕಾರದ ಖಾತರಿಯಡಿಯಲ್ಲಿ ಯೋಜನಾ ಮೊತ್ತಕ್ಕೆ ಶೇ.75 ರಂತೆ ನಬಾರ್ಡ್ ಸಾಲದ ರೂಪದಲ್ಲಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಇದರ ಪೈಕಿ ಈಗಾಗಲೆ ರಾಜ್ಯಾದ್ಯಂತ 188 ಉಗ್ರಾಣಗಳನ್ನು ಪೂರ್ಣಗೊಳಿಸಿ ರೈತರ ಸೇವೆಗೆ ಸಮರ್ಪಿಸಲಾಗಿರುತ್ತದೆ. ಉಳಿದ 77 ಉಗ್ರಾಣಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿದ್ದು, 2023ನೇ ಸಾಲಿನ ಅಂತ್ಯದೊಳಗೆ ಪೂರ್ಣಗೊಳಿಸಲು ಕ್ರಮವಹಿಸಲಾಗುವುದು. |

| ಕ್ರ ಸಂ | ಯೋಜನೆ | ಪೂರ್ಣಗೊಂಡಿರುವ/ ಪ್ರಗತಿಯಲ್ಲಿರುವ ಉಗ್ರಾಣಗಳು | ಕೇಂದ್ರ ಸರ್ಕಾರದ ಅನುದಾನ |
|---|---|---|---|
| 1 | RKVY | 12 | 23.00 ಕೋಟಿ(100%) |
| 2 | WIF & NWS 2013-14 | 43 | 27.22 ಕೋಟಿ (25%) |
| 3 | WIF & NWS 2014-15 | 47 | 35.00 ಕೋಟಿ (25%) |
| 4 | WIF & NWS 2015-16 | 163 | 144.51 ಕೋಟಿ (25%) |
| | **ಒಟ್ಟು** | **265** | **229.73 ಕೋಟಿ** |

<table>
<tr>
<td>ಇ)</td>
<td>ಉಗ್ರಾಣ ನಿರ್ಮಾಣ ಮಾಡಲು ಹಣಕಾಸಿನ ನೆರವನ್ನು ಯಾವ ಮೂಲದಿಂದ ಎಷ್ಟು ಕೋಟಿಗಳನ್ನು ಸಾಲವಾಗಿ ಪಡೆಯಲಾಗಿದೆ ಎಂಬ ಬಗ್ಗೆ ವಿವರ ನೀಡುವುದು ;</td>
<td>ಉಪ ಪ್ರಶ್ನೆ 'ಆ' ಭಾಗದಲ್ಲಿ ವಿವರಿಸಿರುವಂತೆ ಉಗ್ರಾಣಗಳನ್ನು ನಿರ್ಮಾಣ ಮಾಡಲು ಸರ್ಕಾರದ ಖಾತರಿಯಡಿಯಲ್ಲಿ ನಬಾರ್ಡ್ ಸಂಸ್ಥೆಯಿಂದ ಸಾಲವನ್ನು ಪಡೆದಿದ್ದು, ಯೋಜನಾವಾರು ವಿವರಗಳು ಕೆಳಕಂಡಂತೆ ಇರುತ್ತದೆ.
<table>
<tr><th>ಕ್ರ ಸಂ</th><th>ಯೋಜನೆ</th><th>ನಬಾರ್ಡ್ ಸಾಲ (ರೂ. ಕೋಟಿಗಳಲ್ಲಿ)</th></tr>
<tr><td>1</td><td>WIF & NWS 2013-14</td><td>71.87</td></tr>
<tr><td>2</td><td>WIF & NWS 2014-15</td><td>111.20</td></tr>
<tr><td>3</td><td>WIF & NWS 2015-16</td><td>440.35</td></tr>
<tr><td></td><td>ಒಟ್ಟು</td><td>623.42</td></tr>
</table>
ಮೇಲ್ಕಂಡಂತೆ ಉಗ್ರಾಣಗಳನ್ನು ನಿರ್ಮಾಣ ಮಾಡಲು ರೂ. 623.42 ಕೋಟಿಗಳನ್ನು ನಬಾರ್ಡ್ ಸಂಸ್ಥೆಯಿಂದ ಸಾಲದ ರೂಪದಲ್ಲಿ ಪಡೆಯಲಾಗಿರುತ್ತದೆ.</td>
</tr>
<tr>
<td>ಈ)</td>
<td>ಈ ಉಗ್ರಾಣ ನಿರ್ಮಿಸುವ ಕಾಮಗಾರಿ ಕೆಲಸವನ್ನು ಯಾವ ರೀತಿಯ ಟೆಂಡರ್ ನೀಡಿ, ಗುತ್ತಿಗೆ ನೀಡಲಾಗಿದೆ ವಿವರ ನೀಡುವುದು;</td>
<td>ಸಾರ್ವಜನಿಕ ಪಾರದರ್ಶಕತೆ ಕಾಯ್ದೆ/ನಿಯಮಗಳನ್ವಯ ದಿನಪತ್ರಿಕೆಗಳಲ್ಲಿ ಪ್ರಚುರಪಡಿಸಿ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಆಹ್ವಾನಿಸಿ, ಯೋಜನೆಯನ್ನು ಅನುಷ್ಠಾನಗೊಳಿಸಲು ಎಲ್-1 ಗುತ್ತಿಗೆದಾರರಾಗಿ ಆಯ್ಕೆಯಾದ ಮೆ॥ ಸೋಮ ಎಂಟರ್‌ಪ್ರೈಸಸ್ ರವರಿಗೆ ವಹಿಸಲಾಗಿದೆ.</td>
</tr>
<tr>
<td>ಉ)</td>
<td>ಈ ಉಗ್ರಾಣ ನಿರ್ಮಾಣದ ಯೋಜನೆಯಲ್ಲಿ ಉಗ್ರಾಣ ನಿಗಮದ ಅಧಿಕಾರಿಗಳು ಅಕ್ರಮದಲ್ಲಿ ಭಾಗಿಯಾಗಿ ನಷ್ಟಕ್ಕೆ ಕಾರಣರಾಗಿದ್ದಲ್ಲಿ ಅಂತಹವರುಗಳ ಮೇಲೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?</td>
<td>ಯೋಜನೆಯ ಅನುಷ್ಠಾನದಲ್ಲಿ ಅಕ್ರಮವಾಗಿರುವುದಿಲ್ಲ. ಆಡಳಿತಾತ್ಮಕ ಕಾರ್ಯವೈಖರಿಯಲ್ಲಿ ನಿಯಮಗಳ ಉಲ್ಲಂಘನೆಯಾಗಿದ್ದು, ಅದರಂತೆ ಶ್ರೀ ಸಿ.ಆರ್ ಬೆನಕನಹಳ್ಳಿ (ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಅಧ್ಯಕ್ಷರು ಡಿ.ಆರ್.ಟಿ) ಇವರನ್ನು ತನಿಖೆಗಾಗಿ ನೇಮಕ ಮಾಡಲಾಗಿತ್ತು. ಸದರಿರವರ ತನಿಖಾ ವರದಿ ಆಧಾರದ ಮೇಲೆ ನಿಗಮದಲ್ಲಿ ಕಾರ್ಯನಿರ್ವಹಿಸಿದ ವ್ಯವಸ್ಥಾಪಕ ನಿರ್ದೇಶಕರುಗಳ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯನ್ನು ಕೋರಲಾಗಿದ್ದು, ನಿಗಮದ ಅಧಿಕಾರಿ/ಇಂಜಿನಿಯರ್‌ಗಳ ವಿರುದ್ಧ ಈಗಾಗಲೇ ಇಲಾಖಾ ವಿಚಾರಣೆಯನ್ನು ಪ್ರಾರಂಭಿಸಲಾಗಿದ್ದು, ವಿಚಾರಣಾ ವರದಿ ಬಂದ ನಂತರ ಶಿಸ್ತಿನ ಕ್ರಮವನ್ನು ಕೈಗೊಳ್ಳಲಾಗುವುದು.</td>
</tr>
</table>

**No. CO 28 WHC 2022**

(ಎಸ್. ಟಿ. ಸೋಮಶೇಖರ್)
ಸಹಕಾರ ಸಚಿವರು